ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ , ಕುಂದಾಪುರ
ಸಿ.ಸಿ. ನಂಬ್ರ: 667/2025

ಚಾಸಾ:12 ಪ್ರಾಸಾ:7

ದಿನಾಂಕ: 19.01.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಸೂರ |
| ತಂದೆಯ ಹೆಸರು | : | ಕೃಷ್ಣ ನಾಯ್ಕ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಎ ಎಸ್ ಐ |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನಾನು ದಿ: 13-06-2024 ರಿಂದ ಇಲ್ಲಿಯವರೆಗೆ ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಪಿ ಎಸ್ ಐ ರವರು ನೀಡಿದ ಮೌಖಿಕ ಸೂಚನೆಯಂತೆ ದಿ: 19-03-2025 ರಂದು ತಕ್ಷೀರು ಸ್ಥಳಕ್ಕೆ ಭೇಟಿ ನೀಡಿ ಚಾಸಾ-1ರವರು ತೋರಿಸಿದ ಸ್ಥಳದಲ್ಲಿ ಚಾಸಾ-5 ಮತ್ತು 6 ರವರ ಸಮಕ್ಷಮ ಪಂಚನಾಮೆಯನ್ನು ಸಂಜೆ 5-20 ರಿಂದ 6 ಗಂಟೆವರೆಗೆ ತಯಾರಿಸಿರುತ್ತೇನೆ. ಆ ವೇಳೆಗೆ ವೀಡಿಯೋ ಚಿತ್ರೀಕರಣ ಮಾಡಿರುತ್ತೇನೆ. ಸಾಕ್ಷಿದಾರರಾದ ಚಾಸಾ-2 ರಿಂದ 5 ರವರ ಹೇಳಿಕೆ, ಚಾಸಾ-1 ರವರ ಮರುಹೇಳಿಕೆಗಳನ್ನು ಪಡೆದಿರುತ್ತೇನೆ.

ದಿ: 27-03-2024 ರಂದು ಆರೋಪಿತರನ್ನು ದಸ್ತಗಿರಿ ಮಾಡಿ ನಿಯಮ ಪಾಲಿಸಿರುತ್ತೇನೆ.

ದಿ: 02-05-2024 ರಂದು ಚಾಸಾ-1 ರವರ ಗಾಯದ ಪ್ರಮಾಣ ಪತ್ರ ಸ್ವೀಕರಿಸಿ ಕಡತಕ್ಕೆ ಅಳವಡಿಸಿರುತ್ತೇನೆ.

ಸಾಕ್ಷಿ ನಿಪಿ-2 ಮತ್ತು 6 ರಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-2(ಡಿ) ಮತ್ತು 6(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-3 ರಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಎಸ್ ಜಿ ಎಸ್ ರವರಿಂದ:**

ಘಟನೆಯಾದ 2 ದಿನಗಳ ನಂತರ ಚಾಸಾ-1 ರವರ ದೂರನ್ನು ಪಡೆಯಲಾಗಿದೆ ಎಂದರೆ ಸರಿ. ಅದಕ್ಕೂ ಪೂರ್ವದಲ್ಲಿ ಜಯಲಕ್ಷ್ಮೀ-ಆರೋಪಿತರ ತಾಯಿಯಿಂದ ದೂರನ್ನು ಸ್ವೀಕರಿಸಿ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿ. ಘಟನೆಯಾದ 4 ದಿನಗಳ ನಂತರ ಪಂಚನಾಮೆ ಜರುಗಿಸಿರುವುದು ಎಂದರೆ ಸರಿ. 4 ದಿನಗಳ ವಿಳಂಬದ ಬಗ್ಗೆ ಯಾವುದೇ ಕಾರಣ ಪಡೆದಿರುವುದಿಲ್ಲ. ಘಟನೆ ನಡೆದಾಗಿನಿಂದ ಪಂಚನಾಮೆ ಜರುಗಿಸುವ ವೇಳೆಗೆ ಹೆಚ್ಚಿನ ಅವಧಿ ಇದ್ದರೆ ಭೌಗೋಳಿಕವಾಗಿ ವ್ಯತ್ಯಾಸವಾಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಘಟನಾ ಸ್ಥಳದ ಭೌಗೋಳಿಕ ಸ್ಥಿತಿಗತಿಗಳಲ್ಲಿ ವ್ಯತ್ಯಾಸವಾಗಿರುವ ಬಗ್ಗೆ ಘಟನೆಯು ವ್ಯಕ್ತಿಗಳನ್ನು ದೂಡಿ ಆಗಿರುವ ಕಾರಣ ಸ್ಥಳದಲ್ಲಿ ಯಾವುದೇ ವ್ಯತ್ಯಾಸ ಇರಲು ಆಗುವುದಿಲ್ಲ. ಅದು ಸಾರ್ವಜನಿಕ ರಸ್ತೆ ಎಂದರೆ ಸರಿ. ಆ ಅವಧಿಯಲ್ಲಿ ಅಲ್ಲಿ ಎಷ್ಟು ಜನ ಸಂಚರಿಸಿದ್ದರು ಎಂದು ನನಗೆ ತಿಳಿದಿಲ್ಲ.

ಪಂಚನಾಮೆಯನ್ನು ಈ ಪ್ರಕರಣಕ್ಕೆ ಅನುಗುಣವಾಗಿ ಠಾಣೆಯಲ್ಲಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಕೇವಲ ನಿಪಿ-3 ರ ಪೋಟೋ ತೆಗೆದಿರುತ್ತೇವೆ ಎಂದರೆ ಸರಿಯಲ್ಲ. ಮೇಲೆ ನುಡಿದಂತೆ ಯಾವುದೇ ಸಾಕ್ಷಿದಾರರು ನನ್ನ ಸಮಕ್ಷಮ ಪ್ರಕರಣಕ್ಕೆ ಅನುಗುಣವಾಗಿ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತರ ತಾಯಿ ಸಲ್ಲಿಸಿದ ದೂರಿನ ಆಧಾರದ ಮೇಲೆ ಅಂತಿಮ ವರದಿ ಸಲ್ಲಿಸಿರುತ್ತೇವೆ ಎಂದರೆ ಸರಿ. ಎರಡೂ ಘಟನೆಗಳೂ ಒಂದೇ ದಿನ ಒಂದೇ ಸಮಯದಲ್ಲಿ ಜರುಗಿರುತ್ತದೆ ಎಂದರೆ ಸರಿ. ತನಿಖೆಯಿಂದ ಎರಡೂ ಪ್ರಕರಣಗಳು ಸಂಭವಿಸಿರುವಂತೆ ಕಂಡು ಬಂದಿರುತ್ತದೆ. ಯಾವುದೇ ಸಾಕ್ಷ್ಯಧಾರಗಳು ಕಂಡು ಬಾರದೆ ಇದ್ದರೂ ಆರೋಪಿತರ ವಿರುದ್ದ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**